RNU AIR DHARWAD

MAY 21, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಹಾಸನ ಮೂಲದ, ಸಾಹಿತಿ ಬಾನು ಮುಷ್ತಾಕ್ ಅವರ,** ಹಾರ್ಟ್ ಲ್ಯಾಂಪ್ ಕೃತಿಗೆ, ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ.

- **'ಭೂ ಗ್ಯಾರಂಟಿ ಯೋಜನೆ';** ರಾಜ್ಯ ಸರ್ಕಾರದಿಂದ, ಭೂ ರಹಿತರಿಗೆ ಹಕ್ಕು ದೊರಕಿಸುವ ಸಂಕಲ್ಪ – ರಾಹುಲ್ ಗಾಂಧಿ.
- **'ಅಮೃತ ಭಾರತ ರೈಲು ನಿಲ್ದಾಣ ಯೋಜನೆ';** ಪ್ರಧಾನಮಂತ್ರಿಯವರಿಂದ, ರಾಜ್ಯದ ಐದು ನವೀಕೃತ ರೈಲು ನಿಲ್ದಾಣಗಳು, ನಾಳೆ ಉದ್ಘಾಟನೆ.
- **'ಜೇನು ದುಂಬಿಗಳು ನಮ್ಮೆಲ್ಲರನ್ನು ಪೋಷಿಸುತ್ತವೆ'** ಎಂಬ ಧ್ಯೇಯದೊಂದಿಗೆ, ವಿಶ್ವ ಜೇನು ದುಂಬಿ ದಿನಾಚರಣೆ, ಸಂಪನ್ನ.

<><><>

**ಈಗ ವಾರ್ತೆಗಳ ವಿವರ**

<><><>

**ಹೆಸರಾಂತ ಸಾಹಿತಿ, ಹಾಸನ ಮೂಲದ,** ಬಾನು ಮುಷ್ತಾಕ್ ಅವರು, ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಅವರ, ಸಣ್ಣ ಕತೆಗಳ ಅನುವಾದಿತ ಸಂಕಲನ, ಹಾರ್ಟ್ ಲ್ಯಾಂಪ್‌ಗೆ ಈ ಪ್ರಶಸ್ತಿ ಲಭಿಸಿದೆ. ಲಂಡನ್ನಿನ ಟೇಟ್ ಮಾಡರ್ನ್‌ನಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಪ್ರಶಸ್ತಿ ಸ್ವೀಕರಿಸಿದರು. ತಮ್ಮ ಗೆಲುವು ವೈವಿಧ್ಯತೆಗೆ ದೊರೆತ ಜಯ ಎಂದು ಬಾನು ಮುಷ್ತಾಕ್ ಬಣ್ಣಿಸಿದ್ದಾರೆ. ಇದೇ ಮೊದಲ ಬಾರಿಗೆ, ಕನ್ನಡದ ಕೃತಿಯೊಂದಕ್ಕೆ ಪ್ರತಿಷ್ಠಿತ ಬೂಕರ್ ಪ್ರಶಸ್ತಿ ದೊರೆತಂತಾಗಿದೆ. ಪ್ರಶಸ್ತಿ 57 ಲಕ್ಷ 28 ಸಾವಿರ ರೂಪಾಯಿ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. 1990 ಮತ್ತು 2023ರ ಮಧ್ಯೆ ಪ್ರಕಟಗೊಂಡ, 12 ಕತೆಗಳನ್ನು ಹಾರ್ಟ್ ಲ್ಯಾಂಪ್ ಒಳಗೊಂಡ, ಮುಸ್ಲಿಂ ಸಮುದಾಯದ ಬಾಲಕಿಯರು ಮತ್ತು ಹೆಣ್ಣು ಮಕ್ಕಳ ದೈನಂದಿನ ಬದುಕಿನ ಕತೆಗಳನ್ನು ಅನಾವರಣಗೊಳಿಸಿದೆ. ಈ ಸಂಕಲನವನ್ನು ದೀಪಾ ಭಸ್ತಿ ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ.

<><><>

**ಐನೂರು ಕಂದಾಯ ಗ್ರಾಮಗಳನ್ನು** ಘೋಷಿಸುವ ಮೂಲಕ, 6ನೇ ಭೂ ಗ್ಯಾರಂಟಿ ಯೋಜನೆ ಜಾರಿಗೊಳಿಸಿ, ಇಡೀ ದೇಶದಲ್ಲಿ ಪ್ರಥಮ ಬಾರಿಗೆ, ಭೂ ರಹಿತರಿಗೆ ಹಕ್ಕು ದೊರಕಿಸುವ ಸಂಕಲ್ಪ, ರಾಜ್ಯ ಕಾಂಗ್ರೆಸ್ ಸರ್ಕಾರದ್ದು ಎಂದು, ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ವಿಜಯನಗರ ಜಿಲ್ಲೆ, ಹೊಸಪೇಟೆಯ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ, ರಾಜ್ಯ ಸರ್ಕಾರದ ಎರಡು ವರ್ಷಗಳ ಸಾಧನೆ ಬಿಂಬಿಸುವ, 'ಸಮರ್ಪಣಾ ಸಂಕಲ್ಪ'ದಲ್ಲಿ ಅವರು ಮಾತನಾಡಿದರು.

<><><>

**ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ,** ಚುನಾವಣೆ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗಳ ಪೈಕಿ, 142 ವಾಗ್ದಾನಗಳನ್ನು, ಎರಡು ವರ್ಷದಲ್ಲಿ ಪೂರ್ಣಗೊಳಿಸಿದ್ದು, ಬಾಕಿ ಭರವಸೆಗಳನ್ನು, ಮುಂದಿನ ಮೂರು ವರ್ಷಗಳಲ್ಲಿ ಈಡೇರಿಸುವುದಾಗಿ, ನುಡಿದರು.

<><><>

**'ಇನ್ವೆಸ್ಟ್ ಕರ್ನಾಟಕ',** ಕರ್ನಾಟಕದಲ್ಲಿ ಹೂಡಿಕೆ ಮಾಡಿ ಯೋಜನೆಯ ಫಲವಾಗಿ, ಬೆಳಗಾವಿ ಜಿಲ್ಲೆಯೊಂದಕ್ಕೆ 28 ಸಾವಿರ ಕೋಟಿ ರೂಪಾಯಿಗೂ ಅಧಿಕ ಬಂಡವಾಳ ಹರಿದು ಬಂದಿದೆ ಎಂದು, ಕೈಗಾರಿಕೆ ಖಾತೆ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ. ರಕ್ಷಣೆ, ಕೃಷಿ, ಆಹಾರ ಸಂಸ್ಕರಣೆ, ಸುಸ್ಥಿರ ಇಂಧನ ಮುಂತಾದ ಕ್ಷೇತ್ರಗಳಲ್ಲಿ, 10 ಕಂಪೆನಿಗಳು ಬೆಳಗಾವಿಯಲ್ಲಿ ಹೂಡಿಕೆ ಮಾಡುತ್ತಿವೆ. 12 ಸಾವಿರದ 500ಕ್ಕೂ ಅಧಿಕ ನೇರ ಉದ್ಯೋಗಗಳು ಹಾಗೂ ಸಾವಿರಾರು ಪರೋಕ್ಷ ಉದ್ಯೋಗ ಸೃಷ್ಟಿಯಾಗುತ್ತಿದೆ. ಸಣ್ಣ ಉದ್ಯಮಗಳಿಗೆ, ಇದು ವರದಾನವಾಗಲಿದ್ದು, ಹೊಸ ಅವಕಾಶಗಳ ಬಾಗಿಲು ತೆರೆಯಲಿದೆ. ಬೆಳಗಾವಿ ಇನ್ನು ಮುಂದೆ, ದಕ್ಷಿಣ ಭಾರತದ ಕೈಗಾರಿಕೆಗಳ ಹಬ್ ಆಗಲಿದೆ ಎಂದು, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.

<><><>

**ಕೇಂದ್ರ ಪುರಸ್ಕೃತ,** 'ಅಮೃತ ಭಾರತ ರೈಲು ನಿಲ್ದಾಣ ಯೋಜನೆ' ಅಡಿ, ರಾಜ್ಯದ ಧಾರವಾಡ, ಗದಗ, ಗೋಕಾಕ, ಬಾಗಲಕೋಟ ಹಾಗೂ ಮುನಿರಾಬಾದ್ ರೈಲು ನಿಲ್ದಾಣಗಳನ್ನು, ಪ್ರಥಮ ಹಂತದಲ್ಲಿ ಸುಸಜ್ಜಿತವಾಗಿ ಪುನರ್ ಅಭಿವೃದ್ಧಿ ಪಡಿಸಲಾಗಿದ್ದು, ನಾಳೆ ಬೆಳಗ್ಗೆ 10.30ಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ರಾಜಸ್ಥಾನದ ಬಿಕಾನೇರ್‌ನಿಂದ, ವರ್ಚುವಲ್ ವೇದಿಕೆ ಮೂಲಕ, ಲೋಕಾರ್ಪಣೆ ಗೊಳಿಸಲಿದ್ದಾರೆ. ರಾಜ್ಯದ ಒಟ್ಟು 61 ರೈಲು ನಿಲ್ದಾಣಗಳನ್ನು ಪುನರ್ ಅಭಿವೃದ್ಧಿ ಪಡಿಸಲು, ಯೋಜಿಸಲಾಗಿದೆ.

<><><>

**ಪ್ರದೇಶ ಸಮಾಚಾರಕ್ಕಾಗಿ,** ನೈಋತ್ಯ ರೇಲ್ವೆ ಹುಬ್ಬಳ್ಳಿ ವಿಭಾಗದ, ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ, ಮಂಜುನಾಥ್ ಕನಮಡಿ ಮಾಹಿತಿ ನೀಡಿದ್ದಾರೆ.

<><><>

**ಮಂಜುನಾಥ ಕನಮಡಿ ಧ್ವನಿ 60 ಸೆಕೆಂದುಗಳು**

<><><>

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ**

**ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.**

<><><>

**ಕೇಂದ್ರದ ಸಂಸ್ಕೃತಿ ಮತ್ತು ಪ್ರವಾಸೋದ್ಯಮ** ಖಾತೆ ಸಚಿವ, ಗಜೇಂದ್ರಸಿಂಗ್ ಶೇಖಾವತ್, ಇಂದು ಉತ್ತರಕನ್ನಡ ಜಿಲ್ಲೆಯ ಕಾರವಾರಕ್ಕೆ ಆಗಮಿಸಲಿದ್ದಾರೆ. ಗೋಕರ್ಣದ ಶ್ರೀ ಮಹಾಬಲೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ, ಪೂಜೆ ಸಲ್ಲಿಸಲಿದ್ದಾರೆ.

<><><>

**ಬಳಿಕ, ಸಾಂಪ್ರದಾಯಿಕವಾಗಿ** ನಿರ್ಮಿಸಲಾದ, 'ಐ.ಎನ್.ಎಸ್.ವಿ□ಕೌಂಡಿನ್ಯ' ಪ್ರಾಚೀನ ಹೊಲಿಗೆ ಹಡಗನ್ನು ಭಾರತೀಯ ನೌಕಾಪಡೆಗೆ, ವಿಧ್ಯುಕ್ತವಾಗಿ ಹಸ್ತಾಂತರಿಸಲಿದ್ದಾರೆ. ಹೊಲಿಗೆ ಹಾಕಿ ಸಿದ್ಧಪಡಿಸಿದ ಹಡಗು, ಅಜಂತಾ ಗುಹೆಗಳ ವರ್ಣಚಿತ್ರದಿಂದ ಪ್ರೇರಿತವಾಗಿದ್ದು, 5ನೇ ಶತಮಾನದ ಹಡಗಿನ ಪ್ರತಿಕೃತಿಯಾಗಿದೆ.

<><><>

**ಸಾಂಪ್ರದಾಯಿಕ ಹಡಗು ನಿರ್ಮಾತೃ,** ಬಾಬು ಶಂಕರನ್ ನೇತೃತ್ವದ, ಕೇರಳದ ಕುಶಲಕರ್ಮಿಗಳು, ಸಂಪೂರ್ಣವಾಗಿ ಸಾಂಪ್ರದಾಯಿಕ ವಿಧಾನದಿಂದ, ಕಚ್ಚಾ ವಸ್ತುಗಳನ್ನು ಬಳಸಿ, ಹಡಗನ್ನು ತಯಾರಿಸಿದ್ದಾರೆ.

<><><>

**'ಪ್ರಕೃತಿಯಿಂದ ಪ್ರೇರಿತವಾದ,** ಜೇನು ದುಂಬಿಗಳು ನಮ್ಮೆಲ್ಲರನ್ನು ಪೋಷಿಸುತ್ತವೆ' ಎಂಬ ಧ್ಯೇಯದೊಂದಿಗೆ, ಧಾರವಾಡ ಹಾಗೂ ಶಿವಮೊಗ್ಗದ ಜೇನು ಕೃಷಿಕರ ಬಳಗ, ವಿಶ್ವ ಜೇನು ದುಂಬಿ ದಿನ ಆಚರಿಸಿದವು.

<><><>

**ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ,** ಜೇನು ಕೃಷಿ ವಿಭಾಗ ಹಾಗೂ ಅಖಿಲ ಭಾರತ ಸುಸಂಘಟಿತ ಜೇನ್ನೊಣ ಮತ್ತು ಪರಾಗಸ್ಪರ್ಷಿ ಕೀಟಗಳ ಸಂಶೋಧನಾ ಸಂಘದ ವತಿಯಿಂದ, ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಿದ್ದ, ವಿಶ್ವ ಜೇನು ದಿನಾಚರಣೆ ಹಾಗೂ ಮಧುಮೇಳವನ್ನು, ಕೃಷಿ ವಿಶ್ವವಿದ್ಯಾಲಯದ ಉಪ ಕುಲಪತಿ, ಎಸ್.ವಿ. ಸುರೇಶ, ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಭೂಮಿಯ ಮೇಲಿನ ಶೇಕಡ 85ರಷ್ಟು ಪ್ರಜಾತಿಯ ಸಸ್ಯಗಳ ಉಳಿವು, ಜೇನು ದುಂಬಿಗಳ ಪರಕೀಯ ಪರಾಗಸ್ಪರ್ಷವನ್ನು ಅವಲಂಬಿಸಿದೆ. ನಾವು ಸೇವಿಸುವ ಒಂದು ಮೂರಾಂಶ ಭಾಗದ ಆಹಾರ, ಜೇನು ನೊಣಗಳ ಪರಾಗಸ್ಪರ್ಶ ಕ್ರಿಯೆ ಆಧರಿಸಿದೆ.

<><><>

**ಜೇನು ಕೃಷಿಯಲ್ಲಿ ಆಸಕ್ತಿ ಹೊಂದಿದ ರೈತರು,** ತೋಟಗಾರಿಕೆ ಇಲಾಖೆಯನ್ನು, ತರಬೇತಿ ಹಾಗೂ ಜೇನು ಕೃಷಿ ನಿರ್ವಹಣೆ ಮಾಹಿತಿಗಾಗಿ ಸಂಪರ್ಕಿಸಬಹುದು.

<><><>

**ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲೂಕು,** ಕೂಡು ಮಲ್ಲಿಗೆ ಗ್ರಾಮದ ಜೇನು ಕೃಷಿಕ, ಎಂ. ವೆಂಕಟೇಶ ಅವರು, ಪ್ರದೇಶ ಸಮಾಚಾರಕ್ಕಾಗಿ, ಕೃಷಿಯಲ್ಲಿ ಜೇನು ದುಂಬಿಗಳ ಪಾತ್ರವನ್ನು, ತಿಳಿಸಿದ್ದಾರೆ.

<><><>

**ವೆಂಕಟೇಶ ಎಂ. ಧ್ವನಿ 50 ಸೆಕೆಂದುಗಳು**

<><><>

**ಉತ್ತರಕನ್ನಡ ಜಿಲ್ಲೆಯ, ಕೈಗಾ ಅಣುಸ್ಥಾವರ ಸೇರಿದಂತೆ,** ದೇಶದ 18 ಅಣು ಸ್ಥಾವರಗಳ ಸ್ಥಾಪನೆಯಲ್ಲಿ, ಮಹತ್ವದ ಪಾತ್ರ ವಹಿಸಿದ್ದ, ಹಿರಿಯ ಪರಮಾಣು ವಿಜ್ಞಾನಿ, ಕನ್ನಡಿಗ, ಪದ್ಮ ವಿಭೂಷಣ ಪುರಸ್ಕೃತ, ಎಂ.ಆರ್. ಶ್ರೀನಿವಾಸನ್ ತಮಿಳುನಾಡಿನ ಊಟಿಯಲ್ಲಿ ನಿಧನರಾಗಿದ್ದಾರೆ. ಅವರಿಗೆ 95 ವರ್ಷ ವಯಸ್ಸಾಗಿತ್ತು. ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

**ಕರಾವಳಿ ಜಿಲ್ಲೆಗಳು ಸೇರಿದಂತೆ,** ರಾಜ್ಯದ ವಿವಿಧೆಡೆ, ಇನ್ನೂ 5 ದಿನ ಮಳೆ ಮುಂದುವರೆಯಲಿದೆ ಎಂದು, ಬೆಂಗಳೂರಿನ ಹವಾಮಾನ ಇಲಾಖೆ ನಿರ್ದೇಶಕ ಸಿ.ಎಸ್. ಪಾಟೀಲ, ಆಕಾಶವಾಣಿಗೆ ಮಾಹಿತಿ ನೀಡಿದ್ದಾರೆ.

<><><>

**ಬೆಂಗಳೂರಿನಲ್ಲಿ ಸತತ ಮಳೆಯಿಂದ** ಉಂಟಾದ ವಿದ್ಯುತ್ ಅವಘಡದಲ್ಲಿ, ಬಿ.ಟಿ.ಎಂ 2ನೇ ಹಂತದ, ಎಂ.ಎಸ್. ಪಾಳ್ಯದಲ್ಲಿ ಮನಮೋಹನ್ ಕಾಮತ್ ಹಾಗೂ ದಿನೇಶ್ ಮೃತಪಟ್ಟ ಹಿನ್ನೆಲೆ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಘಟನಾ ಸ್ಥಳಕ್ಕೆ ನಿನ್ನೆ ರಾತ್ರಿ ಭೇಟಿ ನೀಡಿ, ಪರಿಶೀಲಿಸಿದರು.

<><><>

**ಚಿಕ್ಕಮಗಳೂರು ಜಿಲ್ಲೆಯಾದ್ಯಂತ,** ಧಾರಾಕಾರ ಮಳೆ ಮುಂದುವರೆದಿದೆ. ನಗರ, ಕೊಪ್ಪ, ಕಳಸ, ಚಾರ್ಮಾಡಿ, ಕೊಟ್ಟಿಗೆಹಾರ ಸೇರಿದಂತೆ, ಹಲವೆಡೆ ಸಾಮಾನ್ಯ ಜನಜೀವನ ಬಾಧಿತವಾಗಿದೆ. ಚಿಕ್ಕಮಗಳೂರಿಗೆ ಇಂದು ರೆಡ್ ಅಲರ್ಟ್ ಹಾಗೂ ನಾಳೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

<><><>

**ಉತ್ತರಕನ್ನಡ ಜಿಲ್ಲೆಯ ಕಾರವಾರ,** ಅಂಕೋಲಾ ಹಾಗೂ ಕುಮಟಾ ಸೇರಿದಂತೆ ಕರಾವಳಿ ಭಾಗಗಳಲ್ಲಿ ಮಳೆ ಮುಂದುವರೆದಿದೆ. ಇಂದು ರೆಡ್ ಅಲರ್ಟ್ ಪ್ರಕಟಿಸಲಾಗಿದೆ. ಪ್ರವಾಸಿಗರು ಹಾಗೂ ಮೀನುಗಾರರು, 23ರ ವರೆಗೆ ಸಮುದ್ರಕ್ಕೆ ಇಳಿಯದಂತೆ, ಮುನ್ನೆಚ್ಚರಿಕೆ ನೀಡಲಾಗಿದೆ.

<><><>

**ಕೊಡಗು ಜಿಲ್ಲೆಯ,** ಮಡಿಕೇರಿ, ಗೋಣಿಕೊಪ್ಪ, ವಿರಾಜಪೇಟೆ ವ್ಯಾಪ್ತಿಯಲ್ಲಿ ಧಾರಾಕಾರ ಮಳೆಯಾಗಿದೆ. ಮಡಿಕೇರಿಯಲ್ಲಿ ಮಂಜು ಮುಸುಕಿದ ವಾತಾವರಣವಿದೆ.

<><><>

**ದಾವಣಗೆರೆ ಜಿಲ್ಲೆಯಲ್ಲಿ,** ಮುಂಗಾರು ಪೂರ್ವ ಮಳೆ ವ್ಯಾಪಕವಾಗಿದ್ದು, ಕಟಾವಿಗೆ ಬಂದ ಭತ್ತ ಮತ್ತು ತೋಟಗಾರಿಕಾ ಬೆಳೆಗಳಿಗೆ, ಹಾನಿ ಸಂಭವಿಸಿದೆ.

<><><>

**ಧಾರವಾಡ ಜಿಲ್ಲೆಯಲ್ಲಿ** ಪ್ರವಾಹದಿಂದ ಬಾಧಿತವಾಗಬಲ್ಲ, 56 ಗ್ರಾಮಗಳಲ್ಲಿ ಮುಂಜಾಗ್ರತೆ ವಹಿಸುವಂತೆ, ಜಿಲ್ಲಾಧಿಕಾರಿ ದಿವ್ಯಾ ಪ್ರಭು, ತಾಲೂಕು ಆಡಳಿತಗಳಿಗೆ ಸೂಚಿಸಿದ್ದಾರೆ.

<><><>

**ಮಾಜಿ ಪ್ರಧಾನಮಂತ್ರಿ,** ರಾಜೀವ ಗಾಂಧಿ ಅವರ ಸಂಸ್ಮರಣೆ ಹಿನ್ನೆಲೆ, ಇಂದು ದೇಶಾದ್ಯಂತ ಭಯೋತ್ಪಾದನಾ ವಿರೋಧಿ ದಿನ, ಆಚರಿಸಲಾಗುತ್ತಿದೆ.

<><><>

**ಉಪ ರಾಷ್ಟ್ರಪತಿ ಜಗದೀಪ್ ಧನ್‌ಕರ್,** ಗೋವಾ ಪ್ರವಾಸ ಕೈಗೊಂಡಿದ್ದು, ಇಂದು ಮರ್ಮ ಗೋವಾ ಬಂದರಿನ ವಿವಿಧ ಯೋಜನೆಗಳನ್ನು, ಉದ್ಘಾಟಿಸಲಿದ್ದಾರೆ.

<><><>

**ಪರಿಶಿ ್ಟ ಜಾತಿ ಒಳ ಮೀಸಲಾತಿ** ಸಮೀಕ್ಷೆ, ಈ ತಿಂಗಳ 28ರ ವರೆಗೆ ನಡೆಯಲಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು**

<><><>

- **ಹಾಸನ ಮೂಲದ, ಸಾಹಿತಿ ಬಾನು ಮುಷ್ತಾಕ್ ಅವರ,** ಹಾರ್ಟ್ ಲ್ಯಾಂಪ್ ಕೃತಿಗೆ, ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ.

- **'ಭೂ ಗ್ಯಾರಂಟಿ ಯೋಜನೆ';** ರಾಜ್ಯ ಸರ್ಕಾರದಿಂದ, ಭೂ ರಹಿತರಿಗೆ ಹಕ್ಕು ದೊರಕಿಸುವ ಸಂಕಲ್ಪ – ರಾಹುಲ್ ಗಾಂಧಿ.
- **'ಅಮೃತ ಭಾರತ ರೈಲು ನಿಲ್ದಾಣ ಯೋಜನೆ';** ಪ್ರಧಾನಮಂತ್ರಿಯವರಿಂದ, ರಾಜ್ಯದ ಐದು ನವೀಕೃತ ರೈಲು ನಿಲ್ದಾಣಗಳು, ನಾಳೆ ಉದ್ಘಾಟನೆ.
- **'ಜೇನು ದುಂಬಿಗಳು ನಮ್ಮೆಲ್ಲರನ್ನು ಪೋಷಿಸುತ್ತವೆ'** ಎಂಬ ಧ್ಯೇಯದೊಂದಿಗೆ, ವಿಶ್ವ ಜೇನು ದುಂಬಿ ದಿನಾಚರಣೆ, ಸಂಪನ್ನ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>